ಮುಂಜಾವು

ವಾರಪತ್ರಿಕೆ.

ಸಂಪಾದಕ: ನಿರಿಮನೆ ನಾಗರಾಜ್.

'MUNJAVU' Kannada Weekly. KOPPA - CHM.

5ನೇ ವರ್ಷ 22ನೇ ಸಂಚಿಕೆ ಕೊಪ್ಪ 15-2-1987 ಭಾನುವಾರ ಬೆಲೆ 50 ಪೈಸೆ

ಯುದ್ಧ ಮತ್ತೆ ಕದ ಬಡಿಯುತ್ತಿದೆ

ಯುದ್ಧದ ಅಂಚಿನವರೆಗೂ ಬಂದಿದ್ದ ಭಾರತ, ಪಾಕಿಸ್ತಾನಗಳು ಸದ್ಯಕ್ಕೇನೋ ಎರಡು ಹೆಜ್ಜೆ ಹಿಂದೆ ಸರಿದು ನಿಂತಿವೆ.. ಆದರೆ ಇಂಥ ಹಿಂದೆ ಸರಿಯುವಿಕೆಗಳು, ಒಪ್ಪಂದ–ಒಡಂಬಡಿಕೆಗಳು ಈ ಹಿಂದೆ ಕೂಡ ಬೇಕಾದಷ್ಟು ಆದದ್ದಿದೆ. ಆಮೇಲೂ ಯುದ್ಧಗಳೇ ಆಗಿವೆ.

ಹಾಗೆ ಸದ್ಯಕ್ಕೇನೋ ಯುದ್ಧ ಹಿಂದೆ ಸರಿದಿರುವಂತೆ ಕಂಡರೂ ಅದರ ಅಪಾಯ ಪೂರ್ತಿ ದೂರವಾಗಿದೆಯೆನ್ನುವ ಖಾತ್ರಿಯೇನೂ ಇಲ್ಲ. ಇಷ್ಟಕ್ಕೂ ಈ ಯುದ್ಧಗಳು ಯಾರಿಗಾಗಿ ನಡೆಯುತ್ತವೆ ? ಅದರಿಂದ ಏನು ಕಲ್ಯಾಣ ಆಗುತ್ತದೆ ? ನಮಗೆ ಯುದ್ಧ ಬೇಕೆ? ಇದನ್ನು ಎಲ್ಲರೂ ಯೋಚಿಸುವ ಅಗತ್ಯವಿದೆ.

ಇಂಥ ಆಲೋಚನೆಗೆ ಗ್ರಾಸ ಕೊಡುವಂತೆ, 'ಸುದ್ದಿ ಸಂಗಾತಿ' ವಾರ ಪತ್ರಿಕೆಯ ಇತ್ತೀಚಿನ ಸಂಪಾದಕೀಯವೊಂದನ್ನು ಇಲ್ಲಿ ಮರು ಪ್ರಕಟಿಸುತ್ತಿದ್ದೇವೆ.

★ ★ ★

ಮೈ ಮುದುರಿಸುವ ಈ ಚಳಿಗಾಲದಲ್ಲಿ, ಗಡಿ ಪ್ರದೇಶಗಳಿಂದ ಮನಸ್ಸಿಗೆ ದುಗುಡ ತುಂಬುವ ಒಂದು ಸುದ್ದಿ ಬಂದಿದೆ — ಯುದ್ಧ ನಮ್ಮ ಮನೆ ಬಾಗಿಲಿಗೆ ಬಂದಿದೆ.

ತಂತಮ್ಮ ಕಷ್ಟ ಸುಖಗಳೇ ತಲೆಭಾರವಾಗಿರುವ ಭಾರತ–ಪಾಕಿಸ್ತಾನವೆಂಬ ಎರಡು ಗರೀಬ ದೇಶಗಳು ವೀರಾವೇಶದಿಂದ ಪರಸ್ಪರ ಯುದ್ಧ ಸನ್ನದ್ಧವಾಗತೊಡಗಿವೆ.

ಈ ಎರಡೂ ದೇಶಗಳು ಒಂದು ದೇಹವನ್ನು ಸೀಳಿ ಎರಡಾಗಿ ಮಾಡಿದಂಥವು. ಆ ವಿಭಜನೆಯ ರಕ್ತಸ್ರಾವ, ಸ್ವಾತಂತ್ರ್ಯದ ನಾಲ್ಕು ದಶಕಗಳು ಕಳೆದರೂ ಇನ್ನೂ ನಿಂತಿಲ್ಲವೆನ್ನುವುದು ಕೇವಲ ರಾಜನೀತಿಯ ವೈಫಲ್ಯವಲ್ಲ. ಬದಲಿಗೆ ಅಪನಂಬಿಕೆಯನ್ನೇ ನೋಡುವ ದೃಷ್ಟಿಯಾಗಿಸಿಕೊಂಡ ಎರಡೂ ದೇಶಗಳ ಜನಸಾಮಾನ್ಯರ ದೃಷ್ಟಿ ದೋಷಕ್ಕೆ ಇತಿಹಾಸ ಕೊಟ್ಟಿರುವ ಪುರಾವೆ.

ಈಗ ಕುಂಟು ನೆಪ ಹಿಡಿದು, ಎರಡೂ ಕಡೆ ಸಮರದ ಸನ್ನಾಹ ನಡೆದಿದೆ ಎಂದರೆ ಅದಕ್ಕೆ ಕಾರಣವನ್ನು ನೀವು ನಮ್ಮ ಎದೆಗಳಲ್ಲಿ ಮತ್ತು ನಾವು ಕಕ್ಕಾವಿಕ್ಕಿಯಾಗಿ ನೋಡುವ ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ಹುಡುಕಬೇಕು. ನಮ್ಮ ಕಣ್ಣಿಗೆ ನಮ್ಮಂಥ ಬಡ ದೇಶಗಳೊಡನೆ ಚೆಲ್ಲಾಟವಾಡುವ ಅಮೆರಿಕವೋ, ರಷ್ಯಾ ದೇಶವೋ ವೈರಿಯಾಗಿ ಕಾಣುವುದಿಲ್ಲ. ಅವರು ನಮ್ಮ ಪಾಲಿಗೆ ಆದರ್ಶವಾಗುತ್ತಾರೆ

ನಾವು ಕೇವಲ ಇವರು ಆಡಿಸಿದಂತೆ ಆಡುವ ಸೂತ್ರದ ಬೊಂಬೆಗಳು ಮಾತ್ರ. ಈಗಲೂ ಈ ಯುದ್ಧ ನಡೆಯಬೇಕೇ? ಬೇಡವೇ? ಎಂಬುದನ್ನು ನಿರ್ಧರಿಸುವುದು ಭಾರತ ಅಥವಾ ಪಾಕಿಸ್ಥಾನ ಅಲ್ಲ. ಬದಲಿಗೆ ಅಮೆರಿಕಾ ಅಥವಾ ರಷ್ಯಾ.

ಮನುಷ್ಯನ ಅನ್ನ, ನೀರು, ಆರೋಗ್ಯವನ್ನು ಕಸಿದುಕೊಂಡು ಅಗಾಧವಾಗಿ ತಯಾರಿಸಿಟ್ಟ ಇವರ ಶಸ್ತ್ರಾಸ್ತ್ರಗಳ ದಾಸ್ತಾನು ಯುದ್ಧವಾಗದ ಹೊರತು ಖರ್ಚಾಗುವುದಾದರೂ ಎಂತು? ಇವರು ವಿನಾಶ ಮತ್ತು ಸಾವಿನ ಮಾರಾಟಗಾರರು. ಯುದ್ಧ ಇವರ ಮಾರಾಟದ ಸಂತೆ ಮೈದಾನ.

ಜತೆಗೆ ಈಗ ಭೀತಿ ಹುಟ್ಟಿಸುತ್ತಿರುವ ಈ ಯುದ್ಧ ನಮ್ಮೊಳಗಿನ ವಿಷದ ಸಂಕೇತ. ತಿನ್ನಲು, ಉಣ್ಣಲು, ಕುಡಿಯಲು ಗತಿಯಿಲ್ಲದ ಭಾರತ–ಪಾಕೀಸ್ತಾನದಂಥ ದೇಶಗಳಿಗೆ ಈ ಯುದ್ಧ ಯಾಕೆ ಬೇಕು ?

ಮನುಷ್ಯನಿಗೆ ಬುದ್ಧಿ ಬಂದಾಗಿನಿಂದ ಆತ್ಮ ರಕ್ಷಣೆಗೆ ಅನುಮಾನ ಮಾತ್ರದಿಂದ ಜಗಳವನ್ನು ಕಲಿತು ಜಗಳ–ಯುದ್ಧ ಮಾಡುತ್ತಾ ಬಂದಿದ್ದಾನೆ. ಆ ಬುದ್ಧಿ ಬಲಿಯದ ಆದಿ ಮಾನವನನ್ನು ಕಾಡಿದ ಅಪನಂಬಿಕೆಯೇ ಈಗಿನ ಆಧುನಿಕ ಮಾನವನನ್ನೂ ಕಾಡುವುದಾದರೆ.... ಇಷ್ಟು ಸಹಸ್ರ ವರ್ಷಗಳ ನಾಗರಿಕತೆ, ಅನುಭವ ನಮಗೆ ಕೊಟ್ಟಿದ್ದೇನು ?

ಯುದ್ಧ ವಿಶ್ವದ ಎಲ್ಲೋ ಯಾವುದೋ ಮೂಲೆಯ ಗಡಿಯಲ್ಲಿ ನಡೆಯುವ ಕಾರ್ಯದ ಆಟವಲ್ಲ, ಬದಲಿಗೆ ಇಲ್ಲೇ ನಮ್ಮ ಗಲ್ಲಿಯಲ್ಲಿ ನಮ್ಮ ಮನೆ ಅಂಗಳದಲ್ಲಿ, ನಮ್ಮ ಅಂತರಂಗದಲ್ಲಿ.... ಕಂದನ ಹಸಿದ ತುಟಿಗೂ ದಕ್ಕದಂತೆ ತಾಯಿ ಮೊಲೆಹಾಲ ಪೂರ್ತಿ ಹೀರಿ ಬಿಡುವ ಪೂತನಿ ಅದು.

ಯಾವ ಯುದ್ಧವೂ ಮನುಷ್ಯನ ಒಳಿತಿಗೆ ಕಿಂಚಿತ್ತೂ ಕಾಣಿಕೆ ಕೊಟ್ಟಿಲ್ಲ ಎಂಬ ಇತಿಹಾಸದ ಚೂರೇ ಚೂರು ಪ್ರಜ್ಞೆಯಾದರೂ ಜಿಯಾ–ರಾಜೀವರಿಗೆ ಬಂದೀತೇ?

—ಇಂದೂಧರ ಹೊನ್ನಾಪುರ

ಮಾಮ್‌ಕೋಸ್‌ನಲ್ಲಿ ಫೆ.23 ರಂದು ಚಾಲಿ, ಆಪಿ, ಕೆಂಪು ಇಡಿ ಅಡಿಕೆಗಳ ವ್ಯಾಪಾರ ಆರಂಭ

ಶಿವಮೊಗ್ಗ : ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ. ಶಿವಮೊಗ್ಗ ಇದರ ಆಡಳಿತ ಮಂಡಳಿಯವರು ಸಂಘದಲ್ಲಿ ಈಗ ನಡೆಸುತ್ತಿರುವ ಅಡಿಕೆಗಳ ಹರಾಜಿನ ಜೊತೆಗೆ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಅಡಿಕೆ ಬೆಳೆಗಾರರ ಅನುಕೂಲಕ್ಕಾಗಿ ಫೆಬ್ರವರಿ ದಿನಾಂಕ 23.2.1987 ರಂದು ಚಾಲಿ, ಆಪಿ, ಚಿಕಣಿ, ಕೆಂಪು ಇಡಿ ಅಡಿಕೆಗಳ ಹರಾಜನ್ನು ಪ್ರಾರಂಭಿಸಲು ತೀರ್ಮಾನಿಸಿದ್ದು ಅಡಿಕೆ ಬೆಳೆಗಾರರು, ತಾವು ಬೆಳೆದ ಈ ಮೇಲ್ಕಂಡ ವಿವರಗಳ ಅಡಿಕೆಗಳನ್ನು ಸಹಕಾರ ಸಂಘಕ್ಕೆ ತಂದು ತಾ|| 23.2.1987ರಂದು ನಡೆಯುವ ಹರಾಜಿನಲ್ಲಿ ಭಾಗವಹಿಸಿ. ಇದರ ಸದುಪಯೋಗ ಪಡೆಯಬೇಕಾಗಿ ಸಂಘದ ಕಾರ್ಯದರ್ಶಿ ಎಸ್ ಕೃಷ್ಣರಾವ್ ಕೋರಿದ್ದಾರೆ.

ಏಲಕ್ಕಿ ವ್ಯಾಪಾರ

ತಾ. 21-2-1987ನೇ ಶನಿವಾರ ಮಾಮ್ಕೋಸ್‌ನಲ್ಲಿ ಏಲಕ್ಕಿ ವ್ಯಾಪಾರವನ್ನು ದೊಡ್ಡ ಪ್ರಮಾಣದಲ್ಲಿ ಏರ್ಪಡಿಸಿರುವುದಾಗಿ ಸಂಘದ ಕಾರ್ಯದರ್ಶಿ ತಿಳಿಸಿದ್ದಾರೆ.

ಲೋ|| ಇ|| ರಸ್ತೆಗಳ ಸುಧಾರಣೆಗೆ ಕೋರಿಕೆ

ಕೊಪ್ಪ: ಜಯಪುರ – ಶೃಂಗೇರಿ ರಸ್ತೆ ಮತ್ತು ಬಿ. ಜಿ. ಕಟ್ಟೆ–ಅಗಳಗಂಡಿ ರಸ್ತೆಗಳಿಗೆ ಸಂಬಂಧಪಟ್ಟಂತೆ ಕೆಲವು ಸುಧಾರಣೆಗಳನ್ನು ಮಾಡುವಂತೆ ಗ್ರಾಮಸ್ಥರು ಲೋಕೋಪಯೋಗಿ ಇಲಾಖೆಯನ್ನು ಕೋರಿದ್ದಾರೆ.

1) ಜಯಪುರದಲ್ಲಿ ಚಿಕ್ಕಮಗಳೂರು ಕಡೆಯಿಂದ ಶೃಂಗೇರಿಗೆ ತಿರುಗುವ ಕಡೆ ಸರಿಯಾದ ಗುರುತು ಇಲ್ಲದೆ ಎಷ್ಟೋ ವಾಹನಗಳು ಹಾಗೇ ಮುಂದುವರಿದು, ಬಿ.ಜಿ.ಕಟ್ಟೆಯಲ್ಲಿರುವ ಬೋರ್ಡು ನೋಡಿ ಆ ರಸ್ತೆಯಲ್ಲಿ ಬಂದು ಅಗಳಗಂಡಿ ತಲುಪುತ್ತವೆ. ಜಯಪುರದಲ್ಲಿ ಸರಿಯಾದ ಮಾರ್ಗಸೂಚಿ ಬೇಕು.

2, ಬಿ.ಜಿ.ಕಟ್ಟೆ–ಅಗಳಗಂಡಿ ರಸ್ತೆಯಲ್ಲಿ ಬೆಳವಿನಕೊಡಿಗೆ ಶಾಲೆಯ ಬಳಿ ಮುಖ್ಯ ರಸ್ತೆಗೆ ಒಂದು ಹಿಮ್ಮುರಿಯಂಥ ತಿರುವಿದೆ. ಆದರೆ ಅಲ್ಲಿ ಸರಿಯಾದ ಮಾರ್ಗಸೂಚಿಯಿಲ್ಲದೆ ಎಷ್ಟೋ ವಾಹನಗಳು ನೇರವಾಗಿ ಹಳ್ಳಿಯ ಕಡೆ ಹೋಗುವ ದಾರಿಯಲ್ಲಿ ಸಾಗಿ ಬಹಳ ಹಿಂಸೆ ಪಡುತ್ತವೆ. ಹಾಗೇ ಈ ರಸ್ತೆ ಅಗಳಗಂಡಿ ಬಳಿ ದೊಡ್ಡ ರಸ್ತೆಗೆ ಸೇರುವಲ್ಲಿಯೂ. ಮಾರ್ಗಸೂಚಿ ಸರಿಯಿಲ್ಲದೆ ವಾಹನಗಳು ಜಯಪುರದ ಕಡೆ ಹೋಗುತ್ತಿವೆ. ಈ ಎರಡೂ ಸ್ಥಳಗಳಲ್ಲಿ ಸರಿಯಾದ ಫಲಕಗಳು ಬೇಕು.

3) ಇದೇ ರಸ್ತೆ ಅಗಳಗಂಡಿ ಬಳಿ ದೊಡ್ಡ ರಸ್ತೆಗೆ ಸೇರುವಲ್ಲಿ '^' ಆಕಾರದ ಬಹಳ ತೀಕ್ಷ್ಣವಾದ ತಿರುವು ಇದ್ದು ವಾಹನಗಳು ಅಪಘಾತಕ್ಕೀಡಾಗುತ್ತಿವೆ. ಇದನ್ನು ತಪ್ಪಿಸಲು ಕೆಳಗಿನ ಚರಂಡಿಗೆ ಪೈಪಿನ ಮೋರಿ ಮಾಡಿ ರಸ್ತೆ ನೇರಗೊಳಿಸಲು ಸಾಧ್ಯವಿದೆ. ಈ ಕೆಲಸವೂ ತುರ್ತಾಗಿ ಆಗಬೇಕು.

–ಇವು ಗ್ರಾಮಸ್ಥರ ಮನವಿಯ ಮುಖ್ಯಾಂಶಗಳು.

ರಬ್ಬರ್ ಬೋರ್ಡಿನವರಿಂದ ಫೆ. 19ಕ್ಕೆ ಕೊಪ್ಪದಲ್ಲಿ ರೈತರ ಭೇಟಿ ಕಾರ್ಯಕ್ರಮ

ಮಂಗಳೂರಿನಲ್ಲಿರುವ ರಬ್ಬರ್ ಬೋರ್ಡಿನ ಅಧಿಕಾರಿಗಳು ಮತ್ತು ತಜ್ಞರು 19.2.87ನೇ ಗುರುವಾರ ಬೆಳಿಗ್ಗೆ 10 ಗಂಟೆಗೆ ಕೊಪ್ಪ ಶಂಕರ್ ಕಂಪೆನಿ ಆವರಣದಲ್ಲಿರುವ ಲಯನ್ಸ್ ಕ್ಲಬ್ ಕಚೇರಿಯಲ್ಲಿ ಮಲೆನಾಡಿನ ರೈತರನ್ನು ಭೇಟಿ ಮಾಡಿ ರಬ್ಬರ್ ಬೆಳೆಯ ಬಗ್ಗೆ ಸಲಹೆ, ಮಾಹಿತಿ, ಮಾರ್ಗದರ್ಶನಗಳನ್ನು ನೀಡಲಿದ್ದಾರೆಂದು ತಿಳಿದು ಬಂದಿದೆ.

ಕಾಫಿ: ಸಾಲಕ್ಕೆ ಅರ್ಜಿ ಆಹ್ವಾನ

ಕಾಫಿ ಮಂಡಳಿಯ "ಹೈರ್ ಪರ್ಚೇಸ್" ಸಾಲ ಸೌಲಭ್ಯದ ರೀತ್ಯಾ ಸ್ಪ್ರಿಂಕ್ಲರ್, ಸ್ಪ್ರೆಯರ್, ಕಾಫಿ ಹಲ್ಲರ್‌ಗಳು ಮತ್ತು ಅವುಗಳ ಬಿಡಿ ಭಾಗಗಳು, ಪವರ್ ಟಿಲ್ಲರ್/ಟ್ರೈಲರ್ ಇತ್ಯಾದಿ ಯಂತ್ರೋಪಕರಣಗಳನ್ನು ಪಡೆಯಲಿಚ್ಛಿಸುವ ರಿಜಿಸ್ಟರ್ ಆಗಿರುವ ಅರ್ಹ ಬೆಳೆಗಾರರು, ನಿಯಮಿತ ನಮೂನೆಯಲ್ಲಿ ಅರ್ಜಿಗಳನ್ನು ಆಯಾ ಪ್ರದೇಶದ ಸಂಪರ್ಕ ಅಧಿಕಾರಿಗಳ ಕಚೇರಿಯಲ್ಲಿ ತಾ|| 20.2.1987ರೊಳಗೆ ನೀಡಲು ಕೋರಲಾಗಿದೆ ಈ ಸಾಲದ ನಿಯಮದಂತೆ ಪವರ್ ಟಿಲ್ಲರ್/ಟ್ರೈಲರ್ ಮತ್ತು ಕಾಫಿ ಹಲ್ಲರ್‌ಗಳನ್ನು ಪಡೆಯಲು ಸಣ್ಣ ಬೆಳೆಗಾರರು ಮಾತ್ರ ಅರ್ಹರಾಗಿರುತ್ತಾರೆ.

ಅರ್ಜಿಗಳ ಸಂಗಡ ಸಿ. ಆರ್. ಸಿ.ಯ ನಕಲು, ಕೊಟೇಷನ್‌ಗಳು ಮತ್ತು ಅರ್ಜಿ ಶುಲ್ಕ ರೂ. 10 ಮುಂಗಡ ಹಣವನ್ನು ಪಾವತಿ ಮಾಡಿದ ಬಗ್ಗೆ ಚಲನ್ ನಕಲುಗಳನ್ನು ಲಗತ್ತಿಸಿರಬೇಕು.

ಹೆಚ್ಚಿನ ವಿವರಗಳಿಗೆ ಸಮೀಪದ ಸಂಪರ್ಕಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಲು ಕಾಫಿ ಮಂಡಳಿ ಉಪ ನಿರ್ದೇಶಕರು (ವಿಸ್ತರಣೆ) ಕೋರಿದ್ದಾರೆ.

ಪಾಳು ಭೂಮಿಯಲ್ಲಿ ಕೇವಲ ಮಳೆಯಾಧಾರದಿಂದ ಬೆಳೆಯಬಲ್ಲ

ರಬ್ಬರು ಬೆಳೆ — ಮಲೆನಾಡಿಗೆ ವರದಾಯಕ

ಇಂದು ರಬ್ಬರು ಬಳಕೆಯಾಗದ ಕ್ಷೇತ್ರ ೇ ಇಲ್ಲ. ರಬ್ಬರಿನ ಬದಲಿಗೆ ಬಳಸಬಲ್ಲ ೇರೊಂದು ವಸ್ತುವೂ ಇಲ್ಲ. ಅಂಥದನ್ನು ಜ್ಞಾನದ ರಂಗದಲ್ಲಿ ಕೃತಕವಾಗಿ ತಯಾ ಸುವ ಸಾಧ್ಯತೆಯೂ ಸದ್ಯದ ಭವಿಷ್ಯದಲ್ಲಿ ಲೂ ಕಂಡು ಬರುತ್ತಿಲ್ಲ. ಹೀಗಾಗಿ ರಬ್ಬರಿಗೆ ತರ ಕೃಷಿ ಉತ್ಪನ್ನಗಳಿಗೆ ಆಗುವಂತೆ ೇಡಿಕೆಯ ಕೊರತೆ ಉಂಟಾಗುವ ಪ್ರಮೇ ು ಯಾವ ಕಾಲಕ್ಕೂ ಬರಲಾರದು.

ಅಂದಮೇಲೆ, ಬರೀ ಪಾಳು – ಬಂಜರು ೂಮಿಯಲ್ಲಿ ಕೇವಲ ಮಳೆಯಾಧಾರದಲ್ಲಿ ೆಳೆಯಬಹುದಾದ ಈ ಬೆಳೆಯನ್ನು ನಮ್ಮ ುಲೆನಾಡಿನ ಸಣ್ಣ ರೈತರು ವ್ಯಾಪಕವಾಗಿ ೆಳೆಯಬಹುದೆನ್ನುತ್ತಾರೆ ಸಾಹಿತಿ – ಪತ್ರ ರ್ತರೂ, ಸ್ವತಃ ಒಬ್ಬ ಪರಿಸರ ಸಂರಕ್ಷಣಾ ಕಳುವಳಿಗಾರರೂ ಆಗಿರುವ, ಕರ್ನಾಟಕ ಬ್ಬರು ಕೃಷಿಕರ ಸಂಘದ ಕಾರ್ಯದರ್ಶಿ ಂ.ಪಾ. ದೈತೋಟ ಅವರು.

ಈ ಸಂಘ ರಬ್ಬರು ಬೆಳೆಯುವ ಬಗ್ಗೆ ್ರಕಟಿಸಿರುವ ಕರಪತ್ರದಿಂದ ಆಯ್ದ ಭಾಗ ನ್ನಿಲ್ಲಿ ಕೊಡುತ್ತಿದ್ದೇವೆ. ಈ ಬಗ್ಗೆ ನಾವು ಂ ಪಾ. ರವರಲ್ಲಿ ಕೆಲವು ಸಂದೇಹಗಳನ್ನೆ ್ದು, ಅದಕ್ಕೆ ಅವರು ಬಹಳ ಸರಳವಾಗಿ, ವರವಾಗಿ ಬರೆದಿರುವ ಉತ್ತರವನ್ನೂ ಸಹ ಲ್ಲಿ ಪ್ರಕಟಿಸುತ್ತಿದ್ದೇವೆ.

ರಬ್ಬರು ಬೆಳೆಯಿರಿ

ರಬ್ಬರು ಭಾರತದಲ್ಲಿಂದು ತುಂಬಾ ಬೇಡಿ ಯಿದ್ದೂ ಪೂರೈಕೆಯ ಕೊರತೆಯಿಂದಾಗಿ ಮದಾಗುತ್ತಿರುವ ಒಂದು ಕೃಷ್ಯುತ್ಪನ್ನ. ಬ್ಬರು ಬೆಳೆಸಲು ಯೋಗ್ಯವಾದ ಲಕ್ಷಾಂತ ಹೆಕ್ಟಾರು ನೆಲ ಕರ್ನಾಟಕ ರಾಜ್ಯದಲ್ಲಿ ಾಳು ಭೂಮಿಯಾಗಿ ಉಳಿದಿದ್ದರೂ ಈ ರೆಗೆ ರಬ್ಬರು ಬೆಳೆಯಾಗಿರುವ ವಿಸ್ತಾರ ಕೇ ಲ ಹತ್ತು ಸಾವಿರ ಹೆಕ್ಟೇರುಗಳು (ಶೇ. 5 ಾಗ) ಮಾತ್ರವಾಗಿದೆ. ಕೇವಲ ಮಳೆಯಾ ಾರದಿಂದ ಬೆಳೆಸಬಹುದಾದ ರಬ್ಬರು ವಿಸ್ತ ಣೆಯಿಂದ ರಾಜ್ಯದ ವರಮಾನ ವಿಪುಲವಾ ುವುದಲ್ಲದೆ ಪರಿಸರಕ್ಕೆ ಹಾನಿ ತಟ್ಟದಂತೆ ಕ್ಕ ಜಲ ವಿದ್ಯುದಾಗಾರ, ಗ್ರಾಮೀಣ ಕೈ ಾರಿಕೆಗಳ ಸ್ಥಾಪನೆ, ಹಳ್ಳಿಗಳಲ್ಲೇ ಉದ್ಯೋ ಅವಕಾಶ, ಸಂಪತ್ತಿನ ವಿಕೇಂದ್ರೀಕರಣ ತ್ಯಾದಿ ಗ್ರಾಮೀಣ ಸ್ವರಾಜ್ಯದ ಕನಸು ನಸಾಗಿಸಲು ಸಾಧ್ಯ.

ಬ್ಬರು ವಿಸ್ತರಣೆಯಿಂದಾಗುವ ಲಾಭ

ಹಿಂದುಳಿದ ಮಲೆನಾಡ ಹಳ್ಳಿಗಳ ಏಳಿಗೆ, ಳ್ಳಿಗಳಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆ. ಡ್ಡಿಮೆಗಳ ಹೆಚ್ಚಳ, ಆರ್ಥಿಕ ಸಂಪನ್ಮೂಲ ಅಗಾಧ ಏರಿಕೆ, ಸಾವಿರಾರು ಮಂದಿಗೆ ದ್ಯೋಗ, ವಿದ್ಯಾವಂತರಿಗೆ ಅವಕಾಶ, ಸ್ವ ದ್ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ, ಆನಾ ೋಗ್ಯಕರ ಉದ್ದಿಮೆ ಮತ್ತು ಕೈಗಾರಿಕೆಗಳ ಾರಣೆ, ಚಿಕ್ಕ ಜಲ ವಿದ್ಯುದಾಗಾರಗಳ ಪನೆಗೆ ವಿಪುಲಾವಕಾಶ, ನಾಶವಾದ ುರಿನ ಪುನರ್ನಿರ್ಮಾಣ, ಮಣ್ಣು ಸವ ತಡೆ. ಬಿರುಗಾಳಿ ತಡೆ, ಮಳೆ ಹಾಗೂ ತೆಗಳ ಹೆಚ್ಚಳ, ಇತರ ಬೆಳೆಗಳಿಗೆ ಸ್ವಾಭಾವಿಕ ರಕ್ಷಣೆ, ಪಾಳು ಭೂಮಿಯ ಸದುಪಯೋಗ, ಕಚ್ಚಾ ರಬ್ಬರು ಕೊರತೆ ನಿವಾರಣೆಯಿಂದ ವಿದೇಶಿ ವಿನಿಮಯ ಉಳಿತಾಯ, ನೀರಾವರಿಗಾಗಿ ಕೆರೆ, ಬಾವಿ, ಅಣೆ ನಿರ್ಮಾಣಗಳ ಖರ್ಚು ಕಡಿಮೆ, ಪಂಪು, ಟಿಲ್ಲರ್, ಟ್ರಾಕ್ಟರ್ ಮತ್ತು ಇಂಧನ ಖರ್ಚು ಉಳಿತಾಯ, ಪರಿಸರ ಮಾಲಿನ್ಯ ತಡೆ, ಪಂಚಭೂತಗಳ ಪಾವಿತ್ರ್ಯ ರಕ್ಷಣೆ, ಇತ್ಯಾದಿ. (ಪ್ರಕಟಣೆ: ಕರ್ನಾಟಕ ರಬ್ಬರು ಕೃಷಿಕರ ಸಂಘ, ಉಜಿರೆ, ದ.ಕ.)

ಕೆಲವು ಸಂದೇಹಗಳು

ನೀಲಗಿರಿ, ಅಕೇಸಿಯಾ ಇತ್ಯಾದಿಗಳಂತೆ ಒಂದೇ ಜಾತಿಯ ಸಸ್ಯಗಳನ್ನು ಬೆಳೆಸುವುದರಿಂದ (ಮೋನೋಕಲ್ಚರ್) ಪರಿಸರಕ್ಕೆ ಪ್ರಯೋಜನವಾಗುವುದಿಲ್ಲ; ಮಿಶ್ರ ಅರಣ್ಯ ಇರಬೇಕು ಎನ್ನಲಾಗುತ್ತದೆ ಹಾಗಿದ್ದರೆ ರಬ್ಬರು ಬೆಳೆಯೂ ಮೋನೋಕಲ್ಚರ್ ಆಗುವುದಿಲ್ಲವೆ ?

ನೀಲಗಿರಿಯಂಥ ಬೆಳೆ ನೆಲದಲ್ಲಿ ಬಹಳ ಆಳದಿಂದಲೂ ನೀರನ್ನು ಹೀರುವುದರಿಂದ ಇಡೀ ಪ್ರದೇಶದಲ್ಲಿ ಭೂಮಿಯೊಳಗಿನ ನೀರಿನ ಪಾತಳಿ (ವಾಟರ್ ಟೇಬಲ್) ಆಳಕ್ಕೆ ಹೋಗುವುದು, ಇಡೀ ಪ್ರದೇಶವನ್ನು ಒಣ ಹವೆ ಆವರಿಸುವುದು, ಈ ಒಣ ಹವೆಯಿಂದ ಬೇರೆ ಬೆಳೆಗಳಿಗೂ ಹಾನಿಯಾಗುವುದು ಇತ್ಯಾದಿ ಅಪಾಯಗಳಿರುವಂತೆಯೇ ರಬ್ಬರು ಬೆಳೆಯಿಂದ ಆಗುವುದಿಲ್ಲವೆ ?

ರಬ್ಬರು ಬೆಳೆಯಿಂದ ರೈತರಿಗೆ ಗಣನೀಯವಾದ ಆದಾಯ ಬರಬಲ್ಲುದೆ ?

ಇತ್ಯಾದಿ.

ಶಂ.ಪಾ ಅವರ ಉತ್ತರಗಳು

ರಬ್ಬರು ವಿಸ್ತರಣೆಯ ಕುರಿತಾಗಿ ನೀವು ಮುಂಡಿಸಿದ ಸಂದೇಹಗಳು ನ್ಯಾಯವಾದ್ದು. ನಮ್ಮ ಅರಣ್ಯ ಇಲಾಖೆ, ಕಾಲು ಶತಮಾನದ ಹಿಂದೆ ಸುಳ್ಯದಲ್ಲಿ ಮಾಡಿದ ಹಾಗೆ ನೈಜ ಅರಣ್ಯವನ್ನು (ವರ್ಜಿನ್ ಫಾರೆಸ್ಟ್) ಬೋಳಿಸಿ ರಬ್ಬರ್ ಎಸ್ಟೇಟುಗಳನ್ನು ನಿರ್ಮಿಸುವುದು, ಅಂದರೆ 'ಮೊನೋಕಲ್ಚರ್' ಮಾಡುವುದು ಸರ್ವಥಾ ಯೋಗ್ಯವಲ್ಲ. ಮಾತ್ರವಲ್ಲ, ಈಗ ಉಳಿದಿರುವ ನೈಜಾರಣ್ಯಗಳನ್ನು ಕಡಿದು ಯಾವುದೇ ಬೆಳೆಯನ್ನು (ಬಂಗಾರದ ಬೆಳೆಯಾದರೂ) ಬೆಳೆಸುವುದು ಮಹಾ ಅಪರಾಧ.

ಈಚೆಗೆ ಎಂದರೆ ಪಟ್ರಮೆಯಲ್ಲಿ ಸಾರಾ ಸಗಟು ಕಾಡು ಸವರಿ ಮಂಗನ ಕಾಯಿಲೆ ಬಂದ ಮೇಲೆ ಪ್ರತಿಭಟನೆಗಳ ಪರಿಣಾಮವಾಗಿ ಸರಕಾರ ಈಗ 'ಕ್ಲಿಯರ್ ಫೆಲ್ಲಿಂಗ್' ನ್ನು ನಿಲ್ಲಿಸಿದೆ. ಆದರೆ ನೈಜಾರಣ್ಯದಿಂದ 'ಸೆಲೆಕ್ಟಿವ್ ಫೆಲ್ಲಿಂಗ್' ಎಂಬ ಹೆಸರಿನಲ್ಲಿ ಈಗಲೂ ಕುದುರೆಮುಖದ ಕಾಡಿನೊಳಗೆ ಅಲ್ಲಲ್ಲಿ ಪ್ಲೈವುಡ್‌ನವರಿಗೆ ಪ್ರವೇಶಿಸಲು ಎಡೆಮಾಡಿಕೊಟ್ಟು ಅರಣ್ಯ ನಾಶಕ್ಕೆಡೆ ಕೊಡುತ್ತಿದೆ. **ನಮ್ಮ ಅರಣ್ಯ ಉಳಿದು, ನಮ್ಮ ಉಸಿರಾಟ ನಿಲ್ಲದಿರಬೇಕಾದರೆ ಈ ಕಾರ್ಯ ನಿಲ್ಲಲೇಬೇಕು. ಇನ್ನೂ ಉಳಿದಿರುವ ವರ್ಜಿನ್ ಫಾರೆಸ್ಟ್‌ಗಳ ಒಳಕ್ಕೆ ಕೊಡಲಿ ಗರಗಸ ಹಿಡಿದ ಮನುಷ್ಯರು ಕಾಲಿಡದಂತಾಗಬೇಕು. ಇದಕ್ಕಾಗಿ ಸರಕಾರವನ್ನು ಮಣಿಸುವ ಚಳವಳಿಯಾಗಬೇಕು.**

ಅರಣ್ಯ ಹೆಚ್ಚಳ ಹೇಗೆ ?

ಇನ್ನುಳಿದಂತೆ ಈಗಾಗಲೇ ಪ್ಲಾಂಟೇಶನ್ ಹೆಸರಲ್ಲಿ, ಉರುವಲಿಗಾಗಿ, ದರಖಾಸ್ತು ಕೊಟ್ಟು, ಕಳವು-ದರೋಡೆಗಳಾಗಿ, ಈ ಮುಂತಾದ ಕಾರಣಗಳಿಂದ ಪಾಳು ಬಿದ್ದಿರುವ (ಅ) ರಕ್ಷಿತಾರಣ್ಯಗಳೂ, 'ಸಿ' ಮತ್ತು 'ಡಿ' ಫಾರೆಸ್ಟು (ಕುರುಚಲು ಯೂಇಪಿಟೋರಿಯಂ ಬೆಳೆ)ಗಳೂ ಒಟ್ಟು 'ಕಾಡು'ನ ಮೂರನೇ ಎರಡು ಭಾಗಕ್ಕಿಂತಲೂ ಹೆಚ್ಚಾಗಿದೆಯಲ್ಲ. ಅದನ್ನು ಪುನಃ ನಿರ್ಮಾಣ ಮಾಡುವ 'ನಾಟಕ' ನಡೆಯುತ್ತಿದ್ದರೂ ವರ್ಷದಿಂದ ವರ್ಷಕ್ಕೆ ಈ ಪಾಳು ಭೂಮಿಯೇ ವಿಸ್ತರಿಸುತ್ತಿದೆ ವಿನಃ ಕಾಡಲ್ಲ. ಕೋಟಿಗಟ್ಟಲೆಯಲ್ಲಿ ನರ್ಸರಿಗಳಿಗಾಗಿ ಖರ್ಚಾಗುತ್ತಿದ್ದರೂ ಕಾಡಾಗಲಿ, ಪ್ಲಾಂಟೇಶನ್‌ಗಳಾಗಲಿ, ಖಾಸಗಿ ಅರಣ್ಯಗಳಾಗಲಿ ಹೆಚ್ಚಾಗುವುದಿಲ್ಲ. ಕಾರಣವೇನು?

ಅರಣ್ಯ ಇಲಾಖೆಯ ಹೆಚ್ಚಿನ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಮರಕಳ್ಳರ ಎಂಜಲು ತಿನ್ನುವುದರಲ್ಲೇ ಆಸಕ್ತಿಯಲ್ಲದೆ ನಾಳಿನ ಜನಾಂಗದ ಭದ್ರತೆಯಲ್ಲಿ ಅಲ್ಲ. ಖಾಸಗಿಯವರು ನೆಟ್ಟು ಬೆಳೆಸಲು ಹೊರಟರೆ ಅದಕ್ಕೂ ಇಲಾಖೆಯೇ ಅಡ್ಡಿ. ರೈತ ನೆಟ್ಟಗಿಡ ಬೆಳೆವವರೆಗೆ ಸಾಕುವುದಕ್ಕೇನು ದಾರಿ ? ಕಷ್ಟಪಟ್ಟು ಸಾಕಿದರೂ ನಾಳೆ ಅದನ್ನು ಕಡಿದು ಮಾರಿದರೆ ತಾನೆ ಹಣ ಸಿಗುತ್ತದೆ? ಕಡಿಯಬೇಕಾದರೆ ಅದರ ಬೆಲೆಯ ಮುಕ್ಕಾಲು ಅಂಶ ಅಧಿಕಾರಿಗಳಿಗೂ, ಮರಕಳ್ಳರಿಗೂ ಪಾಲು ಕೊಡದೆ ಪರವಾನಗಿ ಸಿಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಯಾವ ರೈತ ಮರ ಬೆಳೆಸಲು ಮುಂದೆ ಬಂದಾನು? ಬಂದರೂ ಬೇಗನೇ ಬೆಳೆದು ಹಣ ತರುವ ನೀಲಗಿರಿ ಬೆಳೆಸಲು ಮುನ್ನುಗ್ಗಿಯಾರು!

ಹಾಗಾದರೆ ಈಗಾಗಲೇ ಬೋಳಾಗಿ ನಿಂತು ಮಳೆಗಾಲದಲ್ಲಿ ನೆಲ ಕೊಚ್ಚಿಹೋಗುವುದಕ್ಕೂ ಬೇಸಗೆಯಲ್ಲಿ ತೇವರಾಹಿತ್ಯಕ್ಕೂ ಒಳಗಾಗುವ ಈ ಲಕ್ಷಾಂತರ ಹೆಕ್ಟೇರು ಪಾಳು ಭೂಮಿಯ ಗತಿಯೇನು? ಇದನ್ನು ಮತ್ತೆ ಸಸ್ಯಶ್ಯಾಮಲೆಯಾಗಿಸುವವರು ಯಾರು? ಹೇಗೆ?

ಸ್ವಾವಲಂಬನೆ ಜೊತೆಗೆ ಮನೆ ಮಂದಿಗೆಲ್ಲ ಉದ್ಯೋಗ

ಈಗಾಗಲೇ ಬಡವರಿಗೆ ದರಖಾಸ್ತು ನೀಡಿದ ಮಲೆನಾಡಿನ ಸಾವಿರಾರು ಎಕರೆ ಗುಡ್ಡದ ಇಳಿಜಾರುಗಳೂ ನೀರಾವರಿಯ ಕೊರತೆಯಿಂದಾಗಿ ಹೆಚ್ಚಿನ ಭಾಗ ಕೃಷಿಯಾಗದೆ ಉಳಿದಿದೆ. 1ರಿಂದ 4–6 ಎಕರೆ ದರಖಾಸ್ತು ಹೊಂದಿದ ಹರಿಜನ, ಗಿರಿಜನ ಹಾಗೂ ಬಡತನ ರೇಖೆಯ ಕೆಳಗಿನ ಸಾವಿರಾರು ಜನ ತಮ್ಮ ಭೂಮಿಯ ಸಂಪೂರ್ಣ ಪ್ರಯೋಜನ

(4ನೇ ಪುಟಕ್ಕೆ)

ಪದ್ಯದಂಕಣ

ಕುರ್ಚಿ

ಖಾಲಿ ಕುರ್ಚಿಯೊಂದು ನಿನಗಾಗಿ ಕಾದಿದೆ
ಹೋಗಿ ಕುಳಿತುಕೋ ನಮ್ಮೂರ ಸಿದ್ದ ನೀ
ಹೊಡೆದಾಟ ಮಾಡದಿರು ಜಗಳವನು ಕಾಯದಿರು
ಕುರ್ಚಿಯನ್ನುಳಿದು ನೀನೆಲ್ಲೂ ಹೋಗದಿರು

ಚರಿತ್ರೆಯೊಂದು ನಿನಗಾಗೇ ಹುಟ್ಟುವುದು
ನಿನ್ನ ದಿನಚರಿ ಅದರಲ್ಲಿ ಇರುವುದು
ಮಾಡಿದ್ದು "ಕೆಟ್ಟ ಕೆಲಸ"ವಾದರೂ ಚಿಂತಿಸದಿರು ನೀನು
ತಿದ್ದಿ "ಕಷ್ಟ ಕೆಲಸ" ಎಂದು ಬರೆಯುವರು ಮೇಧಾವಿಗಳು

ನೀ ಸತ್ತ ಮೇಲೆ ನಿನ್ನ ಪ್ರತಿರೂಪ ನಿಲ್ಲಿಸುವರು
ನಗರಗಳ ರಸ್ತೆಗಳಿಗೆ ನಿನ್ನ ಹೆಸರನ್ನಿಡುವರು
ಸ್ಮಾರಕ ಬಂಗಲೆಗಳ ಕಟ್ಟಿಸಿ ನಿನ್ನ ಹೆಸರ ಕೆತ್ತಿಸುವರು
ಮಾಡುವ ಕೆಲಸಗಳಿಗೆ ನೀನೇ ಆದರ್ಶ ಎನ್ನುವರು !

ಶಿವರಾಮ ಭಂಡಾರಿ, ಎಂ. ಎ.

ಆಸೆ

ಹೇಗಾದರೂ
ಪತ್ರಿಕೆಯಲ್ಲಿ
ತನ್ನ ಹೆಸರು
ಬರಬೇಕೆಂದು
ಬಯಸಿದ್ದ
ಸಿದ್ದ.
ಬಹಳಷ್ಟು
ಕತೆ,
ಕವನ
ಕಳಿಸಿ
ವಿಫಲನಾಗಿದ್ದ.
ಕೊನೆಗೊಮ್ಮೆ
ಗೆದ್ದ—
ನೆರಮನೆಗೆ
ನುಗ್ಗಿ
ಹಾಡುಹಗಲೇ
ಕದ್ದ;
ಮರುದಿನದ
ಪತ್ರಿಕೆಯಲ್ಲಿ
ಸುದ್ದಿಯಾಗಿದ್ದ

—ಎಸ್. ಎಸ್. ಸೀತಾರಾಮ್,
ಸತ್ತೀಕಲ್ಲು

ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ :
ಮಂಗಳೂರು – 575 003
ಶಾಖೆ : ಕುದುರೆಗುಂಡಿ

ತಾ|| 15-2-1987

ಏಲಂ ನೋಟೀಸು

ಈ ಕೆಳಗಿನ ಮಹನೀಯರು, ನಮ್ಮ ಶಾಖೆಯಿಂದ ಚಿನ್ನಾಭರಣ, ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ತ್ರಿ ನೋಟೀಸು ಮೂಲಕ ಕೇಳಿಕೊಂಡಿದ್ದಂತೆ, ಕೆಲವರಿಗೆ ಕಳುಹಿಸಿದ ರಿಜಿಸ್ತ್ರಿ ನೋಟೀಸುಗಳು ಕಾರಣಾಂತರದಿಂದ ನಮಗೇನೇ ವಾಪಾಸ್ ಬಂದಿರುವುದರಿಂದಲೂ, ಸದ್ರಿಯವರಿಗೆ ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬ್ಯಾಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ಮಾರ್ಚ್ ತಿಂಗಳ ತಾ|| 11.3.87ರ ಒಳಗೆ ಬ್ಯಾಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾ|| 12 3.87ರ ಅಪರಾಹ್ನ ಗಂಟೆ 3.00ಕ್ಕೆ ಸರಿಯಾಗಿ ಬ್ಯಾಂಕಿನ ವಠಾರದಲ್ಲಿ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ ತಿಳಿದಿರಲಿ.

ಕ್ರ.ಸಂ.	ಸಾಲದ ನಂ.	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು
			ರೂ. ಪೈ
1.	64/84	ಶ್ರೀ ಮಂಜಪ್ಪ ಗೌಡ s/o ಸಿದ್ದಪ್ಪ ಗೌಡ, ಅಲೆಹಳ್ಳಿ ಕಾನೂರು ಪೋಸ್ಟ್, ನ.ರಾ. ಪುರ ತಾ||	470-90
2.	115/84	ಶ್ರೀ ಎ.ಎ. ಕೃಷ್ಣ ಗೌಡ s/o ಅಣ್ಣೇ ಗೌಡ, ಅಲೆಹಳ್ಳಿ ಕಾನೂರು ಅಂಚೆ, ನ.ರಾ. ಪುರ ತಾ||	696-80
3.	119/84	ಶ್ರೀ ಸಚ್ಚಿದಾನಂದ ಮೂರ್ತಿ s/o ವೆಂಕಟಾಚಲಯ್ಯ ಹೆಬ್ಬಾರ್, ಕೃಷಿಕ, ಕಟ್ಟಿನಮನೆ ಅಂಚೆ, ನ.ರಾ. ಪುರ ತಾ||	185-75
4.	125/84	ಶ್ರೀ ಪಿ. ಎಸ್. ಮಂಜುನಾಥ s/o ಪಣ್ಣ ನಾಯಕ್, ನಾಗರಮಕ್ಕಿ, ಸೀತೂರು ಅಂಚೆ, ನ.ರಾ. ಪುರ ತಾ||	1110-30
5.	140/84	ಶ್ರೀ ಬಿ. ರಾಮಪ್ಪ s/o ಬೀರ ಪೂಜಾರಿ ಕಾನೂರು ಅಂಚೆ, ನ.ರಾ. ಪುರ ತಾ||	190-25
6.	149/84	ಶ್ರೀ ಎಸ್.ಆರ್. ತಿಮ್ಮೇ ಗೌಡ s/o ರಾಮೇಗೌಡ, ಸಂಸೆ, ಆರಳಿಕೊಪ್ಪ–ಸಿರಗಳಲೆ ಮೂಡುಬಾಗಲು ಅಂಚೆ, ನ.ರಾ. ಪುರ ತಾ||	2463-95
7.	164/84	ಶ್ರೀ ನಾಗಪ್ಪ ಗೌಡ s/o ಚಿನ್ನೇಗೌಡ, ಬೆಳ್ಳೂರು, ಬೆಳ್ಳೂರು ಅಂಚೆ, ನ.ರಾ ಪುರ ತಾ||	252-80
8.	217/84	ಶ್ರೀ ಬಿ. ಕೆ. ಜಯರಾಜ್, s/o ಕಾಂತರಾಜ್ ಕಪಿಲಾ ಕಾಫಿ ಎಸ್ಟೇಟ್ ಕುದ್ರೆಗುಂಡಿ ಅಂಚೆ, ನ.ರಾ. ಪುರ ತಾ||	3707-45
9.	221/84	ಶ್ರೀಮತಿ ಪ್ರೇಮ w/o ಗಣೇಶ ರಾವ್ ಕೆಳಗಿನ ಪೇಟೆ, ಕೊಪ್ಪ ಕೊಪ್ಪ ಅಂಚೆ..	1668-40
10.	233/84	ಶ್ರೀ ಜಯರಾಮ, s/o ಚಿನ್ನು ಪೂಜಾರಿ ಜೋಗಿಮಕ್ಕಿ ಮನೆ ಕಟ್ಟಿನಮನೆ ಅಂಚೆ, ನ.ರಾ. ಪುರ ತಾ||	661-50
11.	237/84	ಶ್ರೀ ಬಿ.ಕೆ. ಜಯರಾಜ್ s/o ಕಾಂತರಾಜ್ ಕಪಿಲಾ ಕಾಫಿ ಎಸ್ಟೇಟ್ ಕುದುರೆಗುಂಡಿ ಅಂಚೆ.	1264-65

(ಸಹಿ)
ಮ್ಯಾನೇಜರ್

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಕೊಪ್ಪ ಶಾಖೆ :: ಚಿಕ್ಕಮಗಳೂರು ಜಿಲ್ಲೆ

ಪ್ರ ಕ ಟ ಣೆ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೊಪ್ಪ ಶಾಖೆಯ ಪಿಗ್ಮಿ ಕಲೆಕ್ಟರ್ ಆಗಿದ್ದ ಎಚ್. ಎಸ್. ಪ್ರಕಾಶ ಹಂಡೆ ಬಿನ್ ಎಚ್. ಆರ್. ಶ್ರೀನಿವಾಸ ಹಂಡೆ, ಇವರು ಗ್ರಾಹಕರಿಂದ ಪಡೆದ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಮತ್ತು ಪಿಗ್ಮಿ ಹಣ ಸಂಗ್ರಹಣೆ ಮಾಡುವುದನ್ನೂ ಸಹ ನಿಲ್ಲಿಸಿರುವ ವಿಷಯಗಳನ್ನು ಈಗಾಗಲೇ ಸಾರ್ವಜನಿಕರ ಗಮನಕ್ಕೆ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಲಾಗಿದೆ. ಗ್ರಾಹಕರು ತಮ್ಮ ಹಣವನ್ನು ಬ್ಯಾಂಕಿನಿಂದ ವಾಪಸ್ಸು ಪಡೆಯಲು ಇಂದಿನಿಂದ 30 ದಿನಗಳ ಅವಧಿಯಲ್ಲಿ, ದಾಖಲಾತಿಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಲು ಕೋರಲಾಗಿದೆ. ಗ್ರಾಹಕರು 30 ದಿನಗಳಲ್ಲಿ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸದಿದ್ದ ಪಕ್ಷದಲ್ಲಿ ಅಂತಹವರ ಖಾತೆಯಲ್ಲಿನ ಠೇವಣಿ ಹಣದಲ್ಲಿ ಯಾವ ವ್ಯತ್ಯಾಸಗಳೂ ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ. ಅನಂತರ ಬರಬಹುದಾದಂಥ ಯಾವುದೇ ಕ್ಲೈಂಗಳಿಗೆ ಬ್ಯಾಂಕಿನವರು ಯಾವ ರೀತಿಯಲ್ಲೂ ಜವಾಬ್ದಾರರಾಗುವುದಿಲ್ಲ ಮತ್ತು ಅಂತಹ ಕ್ಲೈಂಗಳನ್ನು ಗಣನೆಗೆ ತೆಗೆದುಕೊಳ್ಳದೇ ಖಾತೆಯಲ್ಲಿರುವ ಠೇವಣಿ ಹಣವನ್ನು ಮಾತ್ರ ವಾಪಸ್ಸು ಮಾಡಲು ಬದ್ಧರಾಗಿರುತ್ತೇವೆಂದು ಈ ಮೂಲಕ ತಿಳಿಸಿ ಸಾರ್ವಜನಿಕರ ಮತ್ತು ಗ್ರಾಹಕರ ಸಂಪೂರ್ಣ ಸಹಕಾರವನ್ನು ಕೋರಲಾಗಿದೆ.

ಕೊಪ್ಪ, ವ್ಯವಸ್ಥಾಪಕರು.

ದಿನಾಂಕ : 10.2.1987

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಕ್ಕಮಗಳೂರು

ತಾಯಿ ಮತ್ತು ಮಕ್ಕಳ ಆರೋಗ್ಯಕ್ಕೆ ಅನುಸರಿಸಬೇಕಾದ ಸಲಹೆಗಳು

1. ಗರ್ಭಿಣಿಯರ ಆರೋಗ್ಯ ತಪಾಸಣೆಯನ್ನು 3 ತಿಂಗಳಿಂದ ಹೆರಿಗೆಯಾಗುವವರೆಗೆ, ತರಬೇತಿ ಹೊಂದಿದ ದಾದಿಯವರಿಂದಾಗಲಿ, ವೈದ್ಯರಿಂದಾಗಲಿ ತಪ್ಪದೆ ಮಾಡಿಸಿ.
2. ಗರ್ಭಿಣಿಯರಿಗೆ ಟಿ.ಟಿ. ಚುಚ್ಚುಮದ್ದನ್ನು ಗರ್ಭಾವಸ್ಥೆಯ 16ನೇ ವಾರದಿಂದ 36ನೇ ವಾರದೊಳಗೆ ಎರಡು ಬಾರಿ ತಪ್ಪದೆ ಕೊಡಿಸಿ.
3. ಹೆರಿಗೆಯನ್ನು ತರಬೇತಿ ಪಡೆದ ದಾದಿಯರಿಂದ್ದಾಗಲಿ, ಆಸ್ಪತ್ರೆಯ ವೈದ್ಯರಿಂದಾಗಲಿ ಮಾಡಿಸಿ
4. ಮಗುವಿನ ಜನನವನ್ನು ಜನನ, ಮರಣ ರಿಜಿಸ್ಟ್ರಾರ್‌ರವರಲ್ಲಿ ದಾಖಲಾತಿ ಮಾಡಿಸಿ.
5. ನಿಮ್ಮ ಮಗುವಿಗೆ ರೋಗ ನಿರೋಧಕ ಚುಚ್ಚುಮದ್ದನ್ನು ಮಗು ಹುಟ್ಟಿದ ಮೂರು ತಿಂಗಳಾದ ಕೂಡಲೆ ಕೊಡಿಸಿ.
6. ಮಗುವಿಗೆ 18 ತಿಂಗಳಿಂದ 24 ತಿಂಗಳ ವಯಸ್ಸಿನೊಳಗೆ ವರ್ಧಕ ಚುಚ್ಚುಮದ್ದನ್ನು ತಪ್ಪದೆ ಕೊಡಿಸಿ
7. ಗಂಡಿಗೆ 21 ವರ್ಷ, ಹೆಣ್ಣಿಗೆ 18 ವರ್ಷ ವಯಸ್ಸಾಗುವವರೆಗೆ ಮದುವೆ ಮಾಡಬೇಡಿ.
8. ಮದುವೆಯಾದ ಕೂಡಲೇ ಮೊದಲನೆ ಮಗುವಾಗುವುದನ್ನು 3-4 ವರ್ಷ ತಡೆಗಟ್ಟಿ ಮತ್ತೆ ಎರಡನೇ ಮಗುವಾಗುವುದನ್ನು 3-4 ವರ್ಷ ಮುಂದೂಡಿ ಮೂರನೇ ಮಗುವಾಗದಂತೆ ತಡೆಗಟ್ಟಿ.
9. ಕುಟುಂಬ ಕಲ್ಯಾಣ ಕೇಂದ್ರಗಳಿಗೆ ಭೇಟಿ ಕೊಟ್ಟು ಉಚಿತ ಸೇವಾ ಸೌಲಭ್ಯವನ್ನು ಪಡೆಯಿರಿ.
10. ಅವಶ್ಯಕತೆ ಇದ್ದರೆ ಉಚಿತ ಗರ್ಭಪಾತದ ಸೌಲಭ್ಯವನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಪಡೆಯಿರಿ.
11. ಬೆಳೆಯುವ ಮಗುವಿಗೆ ಹಾಲುಣಿಸಲು ಮತ್ತು ಪೌಷ್ಟಿಕ ಆಹಾರವನ್ನು ವಯಸ್ಸಿಗೆ ಅನುಗುಣವಾಗಿ ಕೊಡಲು ನಿಮ್ಮ ಹತ್ತಿರವಿರುವ ಆಸ್ಪತ್ರೆಗೆ ಭೇಟಿ ಕೊಟ್ಟು ವೈದ್ಯರ ಸಲಹೆ ಪಡೆಯಿರಿ.

(ಸಹಿ)

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಮಗಳೂರು.

ರಬ್ಬರು ಬೆಳೆ — ಮಲೆನಾಡಿಗೆ ವರದಾಯಕ

(2ನೇ ಪುಟದಿಂದ)

ನಡೆಯಲು ಸಾಧ್ಯವಾಗಿಲ್ಲ. (ನಿಮಗೆ ಹತ್ತಿರವಾದ ಉತ್ತಮೇಶ್ವರದಲ್ಲೇ ಕಂಡ ಹಾಗೆ 30 ವರ್ಷಗಳ ಹಿಂದೆಯೇ ದರಖಾಸ್ತು ಪಡೆದ ಭೂಮಿಯಲ್ಲಿ ಈವರೆಗೂ ಯಾವೊಂದು ಬೆಳೆಯನ್ನೂ ಬೆಳೆಸಲು ಸಾಧ್ಯವಾಗದೆ ಬೀಳು ಬಿಟ್ಟಿರುವ ಹರಿಜನ ಕುಟುಂಬಗಳು ಅನೇಕ ಇವೆ.) ಬಂಗಾರದಂಥ ಭೂಮಿ ನೀಡಿ ಸರಕಾರ ಇಂದಿಗೂ ಅವರಿಗೆ 'ಹಸಿರು ಕಾರ್ಡ್' ಮೂಲಕ ಕೈ ತುತ್ತು ನೀಡುತ್ತಿದೆ! ಇದೆಂಥ ಹಳ್ಳಿಗಳ ಅಭಿವೃದ್ಧಿ? ಇದೆಂಥ ಬಡತನ ನಿವಾರಣೆ?

ಈ ಜನ ದರಖಾಸ್ತು ಪಡೆದೊಡನೆ ರಬ್ಬರು ಹಾಕಲು ಅವರಿಗೆ ಬೇಕಾದ ಮಾಹಿತಿ, ಅನುಕೂಲ ಒದಗಿಸಿದ್ದರೆ, ಇಂದೀಗ ಅವರು ಸ್ವಂತ ಮನೆ, ಧಾರಾಳ ಆದಾಯ ಹೊಂದಿದ ಜಮೀನ್ದಾರರಾಗಿರುತ್ತಿದ್ದರು. ಯಾಕೆಂದರೆ ಒಂದು ಎಕರೆ ರಬ್ಬರು ತೋಟದಿಂದ ಸ್ವತಃ ಕೆಲಸ ಮಾಡುವವನಿಗೆ ಅತಿ ಕಡಿಮೆಯೆಂದರೂ ಇಂದಿನ ದಿನದಲ್ಲಿ ಎಲ್ಲ ಖರ್ಚುಗಳೂ, ಮೂಲಧನದ ಬಡ್ಡಿ ಸಮೇತ ಹೋಗಿಯೂ 6–8 ಸಾವಿರ ರೂ. ನೆಟ್ ಲಾಭ ಬರುತ್ತದೆ (ಕೇರಳದಲ್ಲಿ ಎಕರೆಗೆ ರೂ. 50 ಸಾವಿರ ಆದಾಯ ಪಡೆವ ಚಿಕ್ಕ ರೈತರಿದ್ದಾರೆ.) ಒಂದು ಎಕರೆ ತೋಟದ ಕೆಲಸಕ್ಕೆ ಮನೆಯ ಜನವೇ ಧಾರಾಳ ಸಾಕು ಎಂದ ಮೇಲೆ ಮೇಲಿನ ಆದಾಯವಲ್ಲದೆ ಅವರಿಗೆ ಖಾಯಂ ಉದ್ಯೋಗವೂ ಸಿಕ್ಕಿದ ಹಾಗಾಯ್ತು.

ಪರಿಸರಕ್ಕೆ ಇಂಬು

ಇನ್ನು ಪರಿಸರದ ದೃಷ್ಟಿಯಿಂದ ನೋಡಿದರೆ ಎಕರೆಯೊಂದರ 200ರಂತೆ 10 ಅಡಿ. 20 ಅಡಿ ಅಂತರದಲ್ಲಿ ರಬ್ಬರು ಮರ ನೆಟ್ಟರೆ 10ನೇ ವರ್ಷಕ್ಕೆ ಅದು ಸಂಪೂರ್ಣ ಹಸಿರೆಲೆ ಅರಳಿಕೊಂಡು ಬಾನಿಂದ ಬಿದ್ದ ಮಳೆಯ ಒಂದು ಹನಿ ನೀರೂ ನೇರವಾಗಿ ನೆಲಕ್ಕೆರಗದಂತೆ ತಡೆಯುತ್ತದೆ. ರಬ್ಬರು ತೋಟ ಇಳಿಜಾರಿನಲ್ಲಿ ನೆಡುವಾಗಲೇ 'ಕಂಟೂರ್ ಬಂಡ್ ಟೆರೇಸ್' ಮಾಡಿಯುಲ್ಲಿ ಪ್ರತಿ ಸಾಲನ್ನೂ ನೀರು ಒಳಭಾಗಕ್ಕೆ ಇಳಿದು ಭೂಮಿಯೊಳಗಿಂಗುವಂತೆ ಸಮತಳಗೊಳಿಸುವುದರಿಂದ ಬಿದ್ದ ಮಳೆಯ ನೀರೆಲ್ಲಾ ನೆಲದೊಳಕ್ಕಿಳಿದು ಬೇಸಿಗೆಯಲ್ಲಿ ಕೆಳಗಿನ ಭೂಮಿಗಳಿಗೆ, ಕೆರೆ, ಬಾವಿ, ಹೊಳೆ, ಹಳ್ಳಗಳಿಗೆ ನೀರಿನ ಒಸರು ಹೆಚ್ಚುತ್ತದೆ. ಹಾಗೂ ಮಳೆ ಎಷ್ಟೇ ಬಿದ್ದರೂ ಒಂದಿಷ್ಟೂ ಮಣ್ಣು (ಟಾಪ್ ಸಾಯಿಲ್) ಸವಕಳಿಯಾಗುವುದಿಲ್ಲ. ರಬ್ಬರು ವಾರ್ಷಿಕ ಎಲೆಯುದುರಿಸುವ ಮರವಾದರೂ ರಸಗೊಬ್ಬರಾದಿ ಕೊಟ್ಟು ಕೃಷಿ ಮಾಡಿದ ತೋಟದಲ್ಲಿ 8 – 10 ದಿನಗಳಿಗಿಂತ ಹೆಚ್ಚಾಗಿ ಮರ ಬೋಳಾಗದ್ದರಿಂದ ವರ್ಷವೆಲ್ಲಾ ಹಸಿರು ತಪ್ಪುವುದಿಲ್ಲ ಮತ್ತು ಧಾರಾಳವಾಗಿ ಉದುರಿದ ಎಲೆಗಳು ಮಣ್ಣಿನ ಸಾರ ಹೆಚ್ಚಿಸುತ್ತವೆ. ಈವರೆಗೆ ಅರಣ್ಯ ಇಲಾಖೆ ನೆಡುತೋಪು ಮಾಡಿದ ಸಾಗುವಾನಿ, ಧೂಪ, ಗೋಡಂಬಿ ಮೊದಲಾದ ಯಾವುದೇ ಮರಗಳಿಗಿಂತಲೂ ರಬ್ಬರು ಹೆಚ್ಚು ಕಾಲ ಹಸುರು ಹೊಂದಿರುವುದು ಪರಿಸರಕ್ಕೆ ಹೆಚ್ಚಿನ ಲಾಭವಾಗಿದೆ. ಮೇಲಿನ ಯಾವುದೇ ನೆಡುತೋಪಿನಲ್ಲಿ ಕಂಟೂರ್ ಬಂಡಿಂಗ್ ಪದ್ಧತಿ ಇಲ್ಲ; ಮಾಡಿದರೆ ಖರ್ಚು ಹುಟ್ಟುವುದಿಲ್ಲ ಅರಣ್ಯ ಇಲಾಖೆ ಮಾಡುತ್ತಿರುವ ಪ್ಲಾಂಟೇಶನ್‌ಗಳೆಲ್ಲಾ ಮತ್ತೆ ಮತ್ತೆ ಕಡಿತಕ್ಕೊಳಗಾಗಿ ಪರಿಸರ ಕೆಡಿಸುವಂಥವುಗಳೇ ನಿಜ. ಜನ ಮರ ನೆಟ್ಟರೂ ಅದೇ ಗತಿ. ಆದರೆ ರಬ್ಬರನ್ನು ಕಡಿಯದೆ ದಿನ ದಿನವೂ ಧನ ಸಂಗ್ರಹಿಸಲು ಸಾಧ್ಯವಾಗುವುದರಿಂದ 3–4 ದಶಕಗಳ ಕಾಲವಾದರೂ ಭೂಮಿ ಎಡೆಬಿಡದೆ ಹಸಿರಾಗಿರುತ್ತದೆ.

ಮಿಶ್ರಬೆಳೆ

ಇನ್ನು ರೈತ ಮಂದಿ ರಬ್ಬರನ್ನು ಬೆಳೆಸುವಾಗ ಅದು 'ಮೊನೊ ಕಲ್ಚರ್' ಆಗಲಾರದು. ಏಕೆಂದರೆ ಈಗಾಗಲೇ ನೀರಾವರಿ ಇರುವಲ್ಲೆಲ್ಲಾ ಅಡಿಕೆ, ತೆಂಗು, ಕೋಕೋ, ಕಾಳ್ಮೆಣಸು, ಬಾಳೆ ಮೊದಲಾದ ಎಡೆ-ಬೆಳೆಗಳನ್ನು ಬೆಳೆಸುತ್ತಿರುವವರು ತಮ್ಮ ಪಾಳು ಗುಡ್ಡಗಳನ್ನು ರಬ್ಬರಿಗಾಗಿ ಪರಿವರ್ತಿಸುತ್ತಾರೆ. ಆಗ ಬೇಲಿಯ ಸುತ್ತ ಎತ್ತರಕ್ಕೆ ಬೆಳೆವ ಹಲಸು, ಮಾವು, ಉರುವಲಿಗೆ, ಮೋಪಿಗೆ ಆಗುವ ಇತರ ಮರಗಳನ್ನು ಬೆಳೆದರೆ ಬಿರುಗಾಳಿ, ಒಣ ಬಿಸಿಲುಗಳಿಂದ ತೋಟಕ್ಕೆ ರಕ್ಷಣೆಯಾಗುತ್ತದೆ ಮತ್ತು ಅವಶ್ಯವುಳ್ಳ ಹಣ್ಣು ಹಂಪಲು ದೊರೆಯುತ್ತದೆ, ಹಾಗೇ ಎಲ್ಲ ರೈತರೂ ಒಂದೆರಡಾದರೂ ಚಿಕ್ಕು, ಕಸಿ ಮಾವು, ತರಕಾರಿ ಬೆಳೆಯದೆ ಇರುವುದಿಲ್ಲ.

ಕೆಲವು ಕಡೆ ಉದ್ದಕ್ಕೂ ರಬ್ಬರು ಬಂದಾಗ 'ಮೋನೋಕಲ್ಚರ್' ಎಂದು ಕಾಣಬಹುದಾದರೂ ಇಂದಿನ ಪಾಳು ಭೂಮಿಗಳಿಗಿಂತ ಅದು ಸಾವಿರ ಪಾಲು ಮೇಲಲ್ಲವೆ? ಮಲೆನಾಡು ಬೋಳಾಗುತ್ತಿದೆ, ಮಳೆ, ಬೆಳೆ ಕಡಿಮೆಯಾಗುತ್ತಿದೆ, ನದಿಗಳು ಬತ್ತಿ ಹೋಗುತ್ತಿವೆ. ಈಗಲಾದರೂ ನಾವು ಇವನ್ನೆಲ್ಲ ಮತ್ತೆ ಪಡೆಯಲು ಏನಾದರೂ ಫಲಪ್ರದ ಯತ್ನ ಮಾಡಬೇಡವೆ?

ಕೇರಳದ ಕೃಷಿಕರು ಕಾಡಿಗೆ ಸ್ವಲ್ಪ ಹಾನಿ ಒಡ್ಡಿದ್ದು ನಿಜ ಆದರೆ ರಬ್ಬರು, ಗೆಡ್ಡೆಗೆಣಸು, ಬಾಳೆ ಇತಾದಿ ಇತ್ಯಾದಿ ಬೆಳೆಸುವ ಮೂಲಕ ನಮ್ಮ ರೈತರಿಗೆ ಪರಿಶ್ರಮಿಸಿ ಏಳಿಗೆಯಾಗಲು ದಾರಿ ತೋರಿದ್ದಾರೆ. ದರಖಾಸ್ತು ಪಡಕೊಂಡ ನಮ್ಮ ಬಡ ಕೃಷಿಕರು ಸರಕಾರ, ಬ್ಯಾಂಕುಗಳಿಂದ ಕಡಿಮೆ ಬಡ್ಡಿ ಸಾಲ, ಮುಫತ್ತು ಸಹಾಯ ಎಲ್ಲಾ ಪಡೆದು ಗದ್ದೆ ಮಾಡಿ, ಕೆರೆ ಮಾಡಿ, ಪಂಪು ಹಾಕಿ ಎಲ್ಲಾ ನಷ್ಟವಾಗಿ ಹೆಂಡತಿ, ಮಕ್ಕಳಿಂದ ಬೀಡಿ ಕಟ್ಟಿಸಿ, ಸಂಜೆಯ ಹೊತ್ತು ಹೆಂಡದಂಗಡಿಯ ಮುಂದೆ ಕುಡಿದು ಬೀಳುತ್ತಿದ್ದಾರೆ. ಇವರಿಗೆ ಸರಿ ದಾರಿ ತೋರುವ ಅಧಿಕಾರಿಗಳೂ ಇಲ್ಲ, ಪುಡಾರಿಗಳೂ ಇಲ್ಲ. ಪತ್ರಿಕೆಗಳಾದರೂ ಈ ಕೆಲಸ ಮಾಡಬೇಕು.

—ಶಂ. ಶಾ. ದೈತೋಟ

ಎ. ಐ. ಎಸ್. ಎಫ್. ಸೈಕಲ್ ಜಾಥಾ

"ಭಾರತ ಉಳಿಸಿ, ಭಾರತ ಬದಲಿಸಿ" ಘೋಷಣೆಯ ಅಡಿಯಲ್ಲಿ ಅಖಿಲ ಭಾರತ ಯುವಜನ ಒಕ್ಕೂಟವು (ಎ.ಐ.ಎಸ್.ಎಫ್.) ಫೆಬ್ರವರಿ 18ರಿಂದ 25ರ ವರೆಗೆ ಜಿಲ್ಲೆಯಾದ್ಯಂತ ಸೈಕಲ್ ಜಾಥಾವನ್ನು ನಡೆಸಲು ನಿರ್ಧರಿಸಿದ್ದು, ಈ ಜಾಥಾಕ್ಕೆ ಜಿಲ್ಲಾದ್ಯಂತ ಸ್ವಾಗತಕ್ಕೆ ವ್ಯಾಪಕ ಸಿದ್ಧತೆಗಳು ನಡೆದಿರುವುದಾಗಿ ತಿಳಿಸಿದೆ.

ಭಯೋತ್ಪಾದಕತೆ, ಕೋಮುವಾದ ಮತ್ತು ವಿಚ್ಛಿದ್ರಕಾರಕ ಶಕ್ತಿಗಳ ವಿರುದ್ಧ ಹಾಗೂ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆ, ಬಡ ಜನರು ಸಾಗು ಮಾಡುತ್ತಿರುವ ಭೂಮಿಗೆ ಹಕ್ಕು ಪತ್ರ ನೀಡಿಕೆ, ಜಿಲ್ಲೆಯ ಅಭಿವೃದ್ಧಿಗೆ ಸಮಗ್ರ ಯೋಜನೆ, ಜಿಲ್ಲೆಯಲ್ಲಿ ಕೃಷಿ ಹಾಗೂ ಅರಣ್ಯ ವಿದ್ಯಾಲಯಗಳ ಸ್ಥಾಪನೆಗಳಿಗಾಗಿ ಈ ಜಾಥಾ ನಡೆಯಲಿದೆ.

ಕಾರ್ಯಕ್ರಮ

ಫೆ. 18ರಂದು ಚಿಕ್ಕಮಗಳೂರಿನಿಂದ ಹೊರಡುವುದು, 19–ಅಜ್ಜಂಪುರ, 20 ನ. ರಾ. ಪುರ, ಸಂಜೆ ಬಹಿರಂಗ ಸಭೆ, ರಾತ್ರಿ ಬಿ.ಎಚ್. ಕೈಮರದಲ್ಲಿ ತಂಗುವುದು, 21 ಮಧ್ಯಾಹ್ನ 1 ಗಂಟೆಗೆ ಕೊಪ್ಪ, ಸಭೆ, ಸಂಜೆ ಹರಿಹರಪುರ ಮಾರ್ಗವಾಗಿ ಶೃಂಗೇರಿ ತಲುಪಿ ತಂಗುವುದು, 22 ಮಧ್ಯಾಹ್ನ ಜಯಪುರ, ಸಂಜೆ ಬಾಳೆಹೊನ್ನೂರು, 23 ಮೂಡಿಗೆರೆ, 24 ಆಣೂರು, 25 ಮಧ್ಯಾಹ್ನ ಯುವಜನರ ಬೃಹತ್ ಜಾಥಾದೊಂದಿಗೆ ಚಿಕ್ಕಮಗಳೂರಿಗೆ ಹಿಂದಿರುಗಿ, ಬಹಿರಂಗ ಸಭೆಯೊಂದಿಗೆ ಜಾಥಾ ಮುಕ್ತಾಯ.

ಏಲಕ್ಕಿ ಧಾರಣೆ

ಸಕಲೇಶಪುರ

ತಾರೀಕು	ಗರಿಷ್ಠ	ಸರಾಸರಿ
2.2.87	210	110
3.2.87	197	110
4.2.87	221	109
5.2.87	202	94
5.2.87	215	120

ಓದುಗರ ಪತ್ರ

"ಜಿಲ್ಲಾ ದರ್ಶನ" ಪುಸ್ತಕದಲ್ಲಿ ಬಿಟ್ಟು ಹೋದ ಅಂಶಗಳು

ಮಾನ್ಯರೆ,

ಚಿಕ್ಕಮಗಳೂರು ಜಿಲ್ಲಾ ಶತಮಾನೋತ್ಸವದ ಅಂಗವಾಗಿ ಹೊರತರಲಾಗಿರುವ "ಜಿಲ್ಲಾ ದರ್ಶನ" ಪುಸ್ತಕ ಉತ್ತಮವಾಗಿ ಮೂಡಿಬಂದಿದೆ. ಆದರೆ ಜಿಲ್ಲೆಯಲ್ಲಿ ಶ್ರಮಿಸುತ್ತಿರುವ ಹಲವಾರು ಜನ ಪತ್ರಕರ್ತರ ಬಗ್ಗೆ ಮಾಹಿತಿ ಮಾಯವಾಗಿದೆ. ಅಲ್ಲದೆ ಕೆಲವು ಪ್ರೇಕ್ಷಣೀಯ ಸ್ಥಳಗಳ ಪರಿಚಯ ಇಲ್ಲವಾಗಿದೆ.

ಈ ಪುಸ್ತಕವನ್ನು ಪುನರ್ ಮುದ್ರಿಸುವಾಗಲಾದರೂ ಈ ಎಲ್ಲಾ ವಿವರಗಳನ್ನು ಸಂಗ್ರಹಿಸಿ ಇನ್ನೂ ಮೌಲಿಕವಾದ ಕೃತಿಯನ್ನಾಗಿಸಲು ಜಿಲ್ಲಾಧಿಕಾರಿಗಳು ಶ್ರಮಿಸುವರೆಂದು ಆಶಿಸುತ್ತೇನೆ.

—ಎಂ. ವಿ. ಗಂಗಾಧರ್,
ಗುಡ್ಡೇತೋಟ

ಅಡಿಕೆ ಧಾರಣೆ

ಶಿವಮೊಗ್ಗ ತಾ|| 11.2.1987

ಸರಕು : 3029 – 3638
ಬೆಟ್ಟೆ : 1638 – 2089
ಗೊರಬಲು : 820 – 1103

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪವಟಿಗೆ ಅಚ್ಚುಕೂಟ, ಕೊಪ್ಪ.